**ಒಂದನೇ ಅಪರ** ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು

ಸಿಸಿ **2166/2023** ಡಿಡಬ್ಲ್ಯೂ - **1**

| | | |
|---|---|---|
| ಸಾಕ್ಷಿಯ ಹೆಸರು | :- | ವಿ ಮಂಜುಳಮ್ಮ |
| ತಂದೆ/ ಗಂಡನ ಹೆಸರು | :- | ಕೆ ವಿ ವೆಂಕಟಸ್ವಾಮಿ |
| ವಯಸ್ಸು | :- | 62 ವರ್ಷ |
| ಉದ್ಯೋಗ | :- | ನಿವೃತ್ತ ಶಿಕ್ಷಕಿ |
| ವಾಸಸ್ಥಳ | :- | ಚಿಕ್ಕಬಳ್ಳಾಪುರ |

(ಸಾಕ್ಷಿಗೆ ದಿನಾಂಕಃ 11-08-2026 ರಂದು ಪ್ರಮಾಣ ವಚನ ಬೋಧಿಸಲಾಯಿತು)

ಮುಖ್ಯ ವಿಚಾರಣೆಃ ಆರೋಪಿಯ ಪರ ಶ್ರೀ. ರವರಿಂದ ಃ

ನನಗೆ ಪಿರ್ಯಾದಿಯ ಪರಿಚಯ ಇಲ್ಲ. ಚಿಕ್ಕಬಳ್ಳಾಪುರದ ಮಂಜುಳ ಎಂಬ ವ್ಯಕ್ತಿ ಪರಿಚಯ ಇರುತ್ತಾರೆ. ನಾನು ಅವರ ಬಳಿ 1 ಲಕ್ಷಕ್ಕೆ ಚೀಟಿ ಹಾಕಿದ್ದೆ. ಅವರು ಮೋನಿಕ ರವರ ಬಳಿ ಚೀಟಿ ಹಾಕಿಸುವುದಾಗಿ ಹೇಳಿದ್ದರು. ಚೀಟಿಯನ್ನು ತಿಂಗಳು ತಿಂಗಳು ಕಟ್ಟುತ್ತಾ ಬರುತ್ತಿದ್ದೆ. ಚೀಟಿಯ ಹಣವನ್ನು 1 ಲಕ್ಷ ಕೊಟ್ಟಿರುತ್ತಾರೆ, ಅದರ ಭದ್ರತೆಗಾಗಿ ನನ್ನ 2 ಚೆಕ್ ಗಳು, 1 ಪ್ರನೋಟ್ ಪಡೆದುಕೊಂಡಿರುತ್ತಾರೆ. ನಂತರ ಪುನಹಃ ನನ್ನ 2 ಚೆಕ್ ಗಳು, 1 ಪ್ರನೋಟ್ ಪಡೆದುಕೊಂಡಿರುತ್ತಾರೆ. ಪಿರ್ಯಾದುದಾರರು ಮೊನಿಕ ರವರನ್ನು ನಾನು ವಿವಾಹವಾಗಿರುವುದಾಗಿ ನನ್ನ ಶಾಲೆಯ ಬಂದು ಗಲಾಟೆ ಮಾಡಿರುತ್ತಾರೆ. ಗೌರಿಬಿದನೂರಿನಲ್ಲಿ ನಾನು ಭದ್ರತೆಗಾಗಿ ನೀಡಿದ್ದ ಚೆಕ್ ನಲ್ಲಿ 1 ಚೆಕ್ ಉಪಯೋಗಿಸಿಕೊಂಡು 9 ಲಕ್ಷ ರೂ ಗೆ ಒಂದು ಚೆಕ್ ಪ್ರಕರಣ ಹಾಕಿರುತ್ತಾರೆ. ಮತ್ತೊಂದು ಚೆಕ್ ಉಪಯೋಗಿಸಿಕೊಂಡು 6 ಲಕ್ಷ ರೂ ಗೆ ಈ ನ್ಯಾಯಾಲಯದಲ್ಲಿ ಒಂದು ಚೆಕ್ ಪ್ರಕರಣ ಹಾಕಿರುತ್ತಾರೆ. ಹಣ ಕೊಡದಿದ್ದರೆ ರಾಮನಗರದಲ್ಲಿ ಮತ್ತೊಂದು ಚೆಕ್ ಹಾಕುವುದಾಗಿ ಹೇಳಿ ಬೆದರಿಸಿರುತ್ತಾರೆ. ನಾನು 6 ಲಕ್ಷ ರೂ ಹಣವನ್ನು ಪಿರ್ಯಾದಿಯ ಬಳಿ ಪಡೆದಿಲ್ಲ. ಆದ್ದರಿಂದ ಈ ಕೇಸ್ ನಿಂದ ಬಿಡುಗಡೆ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

ಪಾಟೀಸವಾಲು ಃ ಪಿರ್ಯಾದಿಯ ಪರ ಶ್ರೀ. ಎಂಎಂಎಂ ರವರಿಂದ ಃ

ನಾನು ಶಿಕ್ಷಕರಾಗಿ 1992 ನೇ ಸಾಲಿನಿಂದ 2022 ರವರೆಗೂ ಕೆಲಸ ಮಾಡಿರುತ್ತೇನೆ. ನಾನು ನಿವೃತ್ತಿಯಾಗುವ ಕಾಲಕ್ಕೆ ನನ್ನ ಸಂಬಳ 50-60 ಸಾವಿರ ಬರುತ್ತಿತ್ತು. ನಾನು ಆದಾಯ ತೆರಿಗೆಯನ್ನು ಆಗ ಪಾವತಿ ಮಾಡುತ್ತಿದ್ದೆ. ನನ್ನ

Assets and liabilities ನಲ್ಲಿ ಆದಾಯ ತೆರಿಗೆ ತಿಳಿಸಿಲ್ಲ. ನಾನು ಮೋನಿಕ ರವರ ಬಳಿ 1 ಲಕ್ಷ ಚೀಟಿ ಹಾಕಿದ್ದೆ. ಆ ಬಗ್ಗೆ ದಾಖಲೆ ಇಲ್ಲ. ನೋಟೀಸ್ ನ ವಿಳಾಸ ನನ್ನದೇ ಆಗಿರುತ್ತದೆ. ನನ್ನ ವಿಳಾಸಕ್ಕೆ ಯಾವುದೇ ನೋಟೀಸ್ ಬಂದಿಲ್ಲ. ನಿಪಿ-1 ರ ಚೆಕ್ ಮತ್ತು ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನನಗೆ ಈ ಪ್ರಕರಣ ದಾಖಲಾದ ನಂತರ ಗೊತ್ತಾಗಿರುತ್ತದೆ. ಪಿರ್ಯಾದುದಾರರು ನನ್ನ 4 ಚೆಕ್ ಗಳನ್ನು ದುರುಪಯೋಗಪಡಿಸಿಕೊಂಡ ಬಗ್ಗೆ ಕಾನೂನು ಕ್ರಮ ಕೈಗೊಂಡಿಲ್ಲ. ದಿ 19-02-2023 ರಂದು ನಾನು ಪಿರ್ಯಾದಿಯಿಂದ 6 ಲಕ್ಷ ರೂ ಹಣವನ್ನು ಪಡೆದಿದ್ದೆ, ಅದರ ಭದ್ರತೆಗಾಗಿ ನಿಪಿ-1 ರ ಚೆಕ್ ನೀಡಿದ್ದೆ ಎಂದರೆ ಸರಿಯಲ್ಲ. ಸದರಿ ಚೆಕ್ ಅನೂರ್ಜಿತವಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು 2016 ರಲ್ಲಿ ಸದರಿ ಚೆಕ್ ನ್ನು ಮೋನಿಕಾ ರವರಿಗೆ ಕೊಟ್ಟಿದ್ದೆ ಎನ್ನುತ್ತಾರೆ. ವಕೀಲರ ನೋಟೀಸ್ ನ್ನು ನಾನು ಪಡೆದಿಲ್ಲ ಎಂದರೆ ನಾನು ವಿಳಾಸ ಖಾಲಿ ಮಾಡಿದ್ದೆ ಆದ್ದರಿದ ನನಗೆ ನೋಟೀಸ್ ಸಿಕ್ಕಿಲ್ಲ ಎನ್ನುತ್ತಾರೆ. ಪಿರ್ಯಾದುದಾರರು ಅವರ ಸ್ನೇಹಿತ ಅಜಯ್ ರವರಿಂದ ಗೌರಿಬಿದನೂರಿನಲ್ಲಿ ಪ್ರಕರಣ ದಾಖಲಿಸಿರುತ್ತಾರೆ. ಅಜಯ್ ಎಂಬ ವ್ಯಕ್ತಿಯೇ ಪಿರ್ಯಾದಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಪಿರ್ಯಾದದಾರರು ನೀಡಿದ ಹಣವನ್ನು ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಮರುವಿಚಾರಣೆ ಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀ. ಕೆ ಗೋಪಾಲ ಕೃಷ್ಣ.)
ಒಂದನೇ ಅಪರ ಸಿವಿಲ್ ನ್ಯಾಯಾಧೀಶರು,
ಮದ್ದೂರು

<u>ಸಾಕ್ಷಿಯ ಸಹಿಃ-</u>